ಮುಲ್ಕರಾಜ್ ಆನಂದ್(1905–2004) ಅವರು ಬರೆದ ಈ ಕಥೆಯು ಜಗತ್ತಿನ ಶ್ರೇಷ್ಠ ಕಥೆಗಳ ಯಾದಿಗೆ ಸೇರಿದ, ಏಕೈಕ ಭಾರತೀಯ ಲೇಖಕನ ಆಂಗ್ಲ ಮೂಲದ ಕಥೆ ಎನಿಸಿದೆ. ಇಂದಿನ ಪಾಕ್‌ನ ಪೇಶಾವರದಲ್ಲಿ ಜನಿಸಿದ ಮುಲ್ಕರಾಜ್ ಆನಂದ್, ಪದವಿ ಹಾಗೂ ನಂತರದ ಶಿಕ್ಷಣವನ್ನು ಇಂಗ್ಲೆಂಡ್‌ನಲ್ಲಿ ಪಡೆದರು.ಅಂತರರಾಷ್ಟ್ರೀಯ ಓದುಗ ವಲಯವನ್ನು ಹೊಂದಿರುವ ಮುಂಚೂಣಿಯ ಲೇಖಕರು. ಇವರ 'ಅಶ್ವಶ್ರಯ' ಕೃತಿ, ಶ್ರೇಷ್ಠ ಕಾದಂಬರಿಗಳ ಸಾಲಿಗೆ ಸೇರಿದೆ. 'ಅನ್‌ಟಚೆಬಲ್' ಅವರ ಮತ್ತೊಂದು ಪ್ರಸಿದ್ಧ ಕಾದಂಬರಿ. ಪಂಜಾಬಿ ಮತ್ತು ಹಿಂದುಸ್ತಾನಿ ನುಡಿಗಟ್ಟುಗಳನ್ನು ಇಂಗ್ಲಿಷ್ ಸಾಹಿತ್ಯಕ್ಕೆ ಸೇರಿಸಿದ ಪ್ರಥಮ ಲೇಖಕ ಎಂಬ ಅಗ್ಗಳಿಕೆಗೆ ಪಾತ್ರರಾದವರು.

ದಾಟಿ ಜಾತ್ರೆಗೆ ಬಂದರು.

ಅವರು ಹಳ್ಳಿ ಸಮೀಪಿಸುತ್ತಿದ್ದಂತೆ, ಹಲವು ಕಾಲುದಾರಿಗಳ ತುಂಬಾ ಕಿಕ್ಕಿರಿದ ದಟ್ಟ ಜನಸಂದಣಿಯನ್ನು ಮಗು ನೋಡಿತು. ಆ ಜಾತ್ರೆಗೆಂದೇ ದಾರಿಗಳೆಲ್ಲ ನೀರಿನ ಸುಳಿಯಂತೆ ಒಂದೆಡೆ ಕಲೆತಿದ್ದವು ಹಾಗೂ ಅದನ್ನು ನೋಡಿ ಒಮ್ಮೆಗೆ ಹಿಮ್ಮೆಟ್ಟಿತಾದರೂ ತಾನು ಪ್ರವೇಶಿಸಲಿರುವ ಪ್ರಪಂಚದ ಅಸ್ತವ್ಯಸ್ತತೆ ನೋಡಿ ಸಮ್ಮೋಹಿತವಾಯಿತು ಅದು.

ಪ್ರವೇಶ ದ್ವಾರದ ಒಂದು ಮೂಲೆಯಲ್ಲಿದ್ದ ಅಂಗಡಿಯಲ್ಲಿ, ವಿವಿಧ ಬಗೆಯ ಸಿಹಿಖಾದ್ಯಗಳನ್ನು ರಜತ ಹಾಗೂ ಸ್ವರ್ಣದೆಲೆಗಳಿಂದ ಸಿಂಗರಿಸಿದ್ದ ಓರ್ವ ಸಿಹಿಖಾದ್ಯ ವ್ಯಾಪಾರಿ 'ಗುಲಾಬ್ ಜಾಮೂನ್, ರಸಗುಲ್ಲ, ಬರ್ಫಿ, ಜಿಲೇಬಿ' ಎಂದು ಕೂಗು ಹಾಕುತ್ತಿದ್ದ. ಅವನ ಅಂಗಡಿಯ ಸುತ್ತ ಮಂದಿ ದಟ್ಟೈಸಿದರು. ಮಗು ಅವುಗಳನ್ನು ಕಣ್‌ರೆಪ್ಪೆ ಅಲುಗಿಸದೆ ನೋಡಿತು ಹಾಗೂ ಅದರ ಇಷ್ಟದ ಬರ್ಫಿ ನೋಡಿ ಅದರ ಬಾಯಲ್ಲಿ ನೀರೂರಿತು. 'ನನಗೆ ಆ ಬರ್ಫಿ ಬೇಕು' ಎಂದು ನಿಧಾನವಾಗಿ ಅದು ತನ್ನಷ್ಟಕ್ಕೆ ತಾನೇ ಗೊಣಗುಟ್ಟಿತು. ಅದಕ್ಕೆ ಅರ್ಧ ಸತ್ಯ ಗೊತ್ತಿತ್ತು ತಾನು ಬೇಡಿಕೆ ಮುಂದಿಟ್ಟರೆ ಅದು ಈಡೇರಲಾರದೆಂದು, ಏಕೆಂದರೆ ಅದರ ಪೋಷಕರು ಅವನಿಗೆ ನೀನು ತಿಂಡಿಪೋತ ಎನ್ನುತ್ತಿದ್ದರು. ಆದ್ದರಿಂದ, ಅವರಿಂದ ಉತ್ತರ ಸಹ ನಿರೀಕ್ಷಿಸದೆ ಮುಂದಡಿ ಇಟ್ಟಿತು.

ಓರ್ವ ಹೂವಾಡಿಗ 'ಗುಲ್‌ಮೊಹರ್ ಹಾರ, ಗುಲ್‌ಮೊಹರ್ ಹಾರ' ಎಂದು ಕೂಗುತ್ತಿದ್ದ. ಆಗ ಆ ಮಗುವಿಗೆ ಮಂದ ಗಾಳಿಯಲ್ಲಿ ತೇಲಿಬರುವ ತಣಿಸಲಾಗದಂತಹ ಸುಗಂಧ ಪರಿಮಳವನ್ನು ಹತ್ತಿಕ್ಕಲಾಗಲಿಲ್ಲ. ಬುಟ್ಟಿಯಲ್ಲಿ ಪೇರಿಸಿದ್ದ ಪುಷ್ಪರಾಶಿಯೆಡೆಗೆ ಹೋದ ಅದು ಅರ್ಧಂಬರ್ಧ ವಟಗುಟ್ಟುತ್ತಾ 'ಆ ಹಾರ ಬೇಕು ನನಗೆ' ಎಂದಿತು. ಆದರೆ, ತನ್ನ ಪೋಷಕರು ಹಾರ ಖರೀದಿಸಿ ಕೊಡಲು ನನಗೆ ಒಪ್ಪರೆಂದು ಅದಕ್ಕೆ ಚೆನ್ನಾಗಿಯೇ ಗೊತ್ತಿತ್ತು. ಏಕೆಂದರೆ ಅವು ಬಹು ಸಸ್ತಾ ಎಂದೆನ್ನುವ ಅವರ ಉತ್ತರಕ್ಕೂ ಕಾಯದೆ ಅದು ಮುಂದಕ್ಕೆ ಹೆಜ್ಜೆ ಹಾಕಿತು. ಓರ್ವ, ಗಳವೊಂದಕ್ಕೆ ಹಳದಿ, ಹಸಿರು, ಕೆಂಪು ಹಾಗೂ ಕೆನ್ನೀಲಿ ಬಣ್ಣದ ಬಲೂನ್‌ಗಳನ್ನು ನೇತಾಕಿಕ್ಕೊಂಡು, ಹಾರಾಡಿಸುತ್ತಾ ನಿಂತಿದ್ದ. ಅವುಗಳ ರೇಶಿಮೆ ಬಣ್ಣದ ಕಾಮನಬಿಲ್ಲು ಅವನ ಚಿತ್ತವನ್ನು ಬಹುವಾಗಿ ಆಕರ್ಷಿಸಿತು. ಅವೆಲ್ಲವನ್ನು ತಾನು ಪಡೆಯಲೇಬೇಕೆಂಬ ಹೇಳತೀರದು ಉತ್ಕಟೇಚ್ಛೆ ಅದರಲ್ಲಿ ಉದಿಸಿತು. ಆದರೆ, ತನ್ನ ಪೋಷಕರು ಬಲೂನ್‌ಗಳನ್ನು ಖರೀದಿಸಿಕೊಡರೆಂದು ಚೆನ್ನಾಗಿ ಬಲ್ಲ ಅದು ಈಗಲೂ ಮುಂದಕ್ಕೆ ಹೆಜ್ಜೆ ಹಾಕಿತು. ಏಕೆಂದರೆ ಅವುಗಳೊಂದಿಗೆ ಆಟವಾಡಲು ನೀನೇನು ಎಳೆ ಕಿಸ್ಲೇನಾ ಎಂದೆನ್ನುವರೆಂದು ತಿಳಿದಿದ್ದ ಅದು ಈಗ ಮುಂದಕ್ಕೆ ಅಡಿ ಇಟ್ಟಿತು.

ಒಬ್ಬ ಐಂದ್ರಜಾಲಿಕ ಸರ್ಪವೊಂದರ ಎದುರು ಕೊಳಲು ನುಡಿಸುತ್ತಿದ್ದ. ಅದು ಬುಟ್ಟಿಯೊಳಗೆ ಸುತ್ತು ಹಾಕಿಕೊಂಡು ಮಲಗಿತ್ತು. ಅದರ ತಲೆ ಹಂಸದ ಶಿರದಂತೆ ಮೇಲೆತ್ತಿ ಬಾಗಿ ಸುಂದರವಾಗಿತ್ತು. ಅವನು ನುಡಿಸುವ ಸಂಗೀತ ಸೂಕ್ಷ್ಮ ಜಲಪಾತದ ಮಂದ ಕಲಕಲನಾದದಂತೆ ಅದರ ಅಗೋಚರ ಕಿವಿಗಳಿಗೆ ತಾಗಿ ಅದನ್ನು ಅಪಹರಿಸಿತ್ತು. ಮಗು ಐಂದ್ರ ಜಾಲಿಕನ ಬಳಿಗೆ ತೆರಳಿತು. ಆದರೆ ತನ್ನ ಪೋಷಕರು ಅವನು ನುಡಿಸುವ ಒರಟು ಸಂಗೀತವನ್ನು ಆಲಿಸಲು ಬಿಡರೆಂದು ಗೊತ್ತಿದ್ದ ಅದು ಈಗ ಮುಂದಡಿ ಇಟ್ಟಿತು.